## ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 949 |
| 2. | ಸದಸ್ಯರ ಹೆಸರು | : | ಮಾನ್ಯ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 12.03.2020 |
| 4. | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಪ್ರಶ್ನೆ | ಉತ್ತರ |
|---|---|
| ಅ)ರಾಜ್ಯದಲ್ಲಿರುವ ಸಣ್ಣ ಪ್ರಮಾಣದ ಉದ್ದಿಮೆಗಳು ಹಾಗೂ ಹಿಂದುಳಿದ ಪ್ರದೇಶಗಳ ಕೈಗಾರಿಕಾ ಅಭಿವೃದ್ಧಿಗಾಗಿ ಮತ್ತು ನೂತನ ಉದ್ದಿಮೆಗಳನ್ನು ಸ್ಥಾಪಿಸುವವರಿಗೆ ಕೆ.ಎಸ್.ಎಫ್.ಸಿ ಅನುಷ್ಠಾನ-ಗೊಳಿಸುತ್ತಿರುವ ಯೋಜನೆಗಳು ಯಾವುವು: | ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ ಪ್ರಸ್ತುತ ಇರುವ ವಿವಿಧ ರೀತಿಯ ಸಾಲದ ಯೋಜನೆಗಳ ವಿವರಗಳು ಈ ಕೆಳಕಂಡಂತಿರುತ್ತವೆ:<br><br>1. **ಸಾಮಾನ್ಯ ಯೋಜನೆ:** ಹೊಸ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಘಟಕಗಳ ಮತ್ತು ಸೇವಾಕ್ಷೇತ್ರದ ಉದ್ದಿಮೆಗಳ ಸ್ಥಾಪನೆ/ವಿಸ್ತರಣೆ/ಆಧುನೀಕರಣ/ವೈವಿಧ್ಯೀಕರಣಗೊಳಿಸಲು ಸಾಲದ ನೆರವು.<br><br>**ಆ)ಮೂಲಭೂತ ಸೌಕರ್ಯಗಳ ಯೋಜನೆಗಳಿಗೆ ನೆರವು:** ಕೈಗಾರಿಕಾ ವಸಾಹತುಗಳು, ಸಾಫ್ಟ್‌ವೇರ್ ಪಾರ್ಕುಗಳು, ಸಿದ್ಧ ನಿರ್ಮಿಸಿದ ಷೋರೂಂಗಳು, ತರಬೇತಿ ಕೇಂದ್ರಗಳು, ವೃತ್ತಿಪರ ಶೈಕ್ಷಣಿಕ ಸಂಸ್ಥೆಗಳು, ಗೋದಾಮು, ಉಗ್ರಾಣ ಇತ್ಯಾದಿಗಳ ನಿರ್ಮಾಣಕ್ಕೆ ಸಾಲ ಸೌಲಭ್ಯ ದೊರೆಯುತ್ತದೆ.<br><br>2. **ಹೊಸ ಘಟಕಗಳಿಗೆ ಏಕ ಗವಾಕ್ಷಿ ಯೋಜನೆ (ಸಿಂಗಲ್ ವಿಂಡೋ ಯೋಜನೆ):** ಹೊಸದಾಗಿ ಸ್ಥಾಪಿಸಲಾಗುವ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಘಟಕಗಳಿಗೆ ಸಕಾಲಿಕ ಹಾಗೂ ಸಾಕಷ್ಟು ದುಡಿಮೆ ಬಂಡವಾಳದ ಜೊತೆಗೆ ಸ್ಥಿರಾಸ್ತಿಗಾಗಿ ಅವಧಿ ಸಾಲವನ್ನು ನೀಡಲಾಗುವುದು.<br><br>3. **ಸಣ್ಣ ಪ್ರಮಾಣದ ರಸ್ತೆ ಸಾರಿಗೆ ಯೋಜನೆ (SRTO):** ವಾಹನದ ಅಡಿಕಟ್ಟು (ಬಾಡಿ ಬಿಲ್ಡಿಂಗ್) ಆರಂಭ ತೆರಿಗೆ ಹಾಗೂ ವಿಮೆಗಾಗಿ ತಗಲುವ ವೆಚ್ಚವನ್ನು ಭರಿಸಲು ಅವಧಿ ಸಾಲವನ್ನು ನೀಡಲಾಗುವುದು. |

**4 .ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:** ಈ ಯೋಜನೆಯಡಿ ತಯಾರಿಕಾ ಕ್ಷೇತ್ರ ಹಾಗೂ ಸೇವಾ ಕ್ಷೇತ್ರದಲ್ಲಿ ಸಣ್ಣ ಹಾಗೂ ಮಧ್ಯಮ ವರ್ಗದ ಕೈಗಾರಿಕೆ ಘಟಕಗಳನ್ನು ಮೊದಲ ಬಾರಿ ಹೊಸದಾಗಿ ಸ್ಥಾಪಿಸುವ ಮೊದಲ ಪೀಳಿಗೆ ಮಹಿಳಾ ಉದ್ದಿಮೆದಾರರಿಗೆ 200.00 ಲಕ್ಷ ರೂ.ಗಳವರೆಗೆ ಶೇ.4 ರಷ್ಟು ಬಡ್ಡಿ ದರದಲ್ಲಿ ಸಾಲದ ಸೌಲಭ್ಯ ನೀಡಲಾಗುವುದು. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮರುಪಾವತಿಸಲಾಗುತ್ತದೆ.

**5. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಬಡ್ಡಿ ಸಹಾಯ ಧನ ಯೋಜನೆ:** ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಉದ್ದಿಮೆದಾರರನ್ನು ಪ್ರೋತ್ಸಾಹಿಸಲು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಘಟಕಗಳ ಮತ್ತು ಸೇವಾಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಶೇ.4 ರಷ್ಟು ವಾರ್ಷಿಕ ಬಡ್ಡಿದರದಲ್ಲಿ ಅವಧಿ ಸಾಲವನ್ನು ನೀಡಲಾಗುತ್ತಿದೆ. ಸಂಸ್ಥೆಯು ವಿಧಿಸುವ ಸಾಮಾನ್ಯ ಬಡ್ಡಿದರ ಮತ್ತು ಶೇ.4ರ ವ್ಯತ್ಯಾಸದ ಬಡ್ಡಿ ಹಣವನ್ನು ಸಮಾಜ ಕಲ್ಯಾಣ ಇಲಾಖೆಯು ಭರಿಸುತ್ತಿದೆ. ಈ ಯೋಜನೆಯಡಿ ಕನಿಷ್ಟ 10.00 ಲಕ್ಷ ರೂ.ಗಳಿಂದ ಗರಿಷ್ಟ 10.00 ಕೋಟಿ ರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ. (ಅವಧಿಸಾಲ ಮತ್ತು ಗರಿಷ್ಟ 50.00 ಲಕ್ಷ ರೂ.ಗಳ ಒಂದೇ ಬಾರಿಯ ದುಡಿಮೆ ಬಂಡವಾಳ ಸೇರಿ).

**6. ಎಲ್ಲಾ ವರ್ಗದ ಉದ್ದಿಮೆದಾರರಿಗೆ ಶೇ.4ರ ನಿವ್ವಳ ಬಡ್ಡಿದರ ಸಾಲ ಯೋಜನೆ (ಶೇ.10ರಷ್ಟು ಬಡ್ಡಿ ಸಹಾಯಧನ ಯೋಜನೆ):** ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಮತ್ತು ಹಾಲಿ ಘಟಕಗಳ ಉತ್ಪಾದನೆಗೆ ಉಪಯೋಗಿಸುವ ಕಟ್ಟಡ ಮತ್ತು ಯಂತ್ರೋಪಕರಣಗಳಿಗೆ, ಕನಿಷ್ಟ ರೂ.5.00 ಲಕ್ಷ ಗರಿಷ್ಟ ರೂ.500.00 ಲಕ್ಷದವರೆಗೆ ಅವಧಿ ಸಾಲ. ಈ ಯೋಜನೆಯು ದಿನಾಂಕ 01.10.2018ರಿಂದ ಜಾರಿಯಲ್ಲಿದೆ.

| | |
|---|---|
| | **7. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಉದ್ಯಮಿಗಳ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಹಣಕಾಸಿನ ಯೋಜನೆ :**<br>• ರಾಜ್ಯ ಸರ್ಕಾರದ ಬಂಡವಾಳ ಅನುದಾನ ಗರಿಷ್ಟ 75%.<br>• ಸಂಸ್ಥೆಯ ಅವಧಿ ಸಾಲ, ಸ್ಥಿರಾಸ್ತಿ ಮೇಲೆ ಗರಿಷ್ಟ 90% ರಷ್ಟು, ಶೇ.4ರ ನಿವ್ವಳ ಬಡ್ಡಿದರದಲ್ಲಿ.<br>• ಪ್ರವರ್ತಕರ ಬಂಡವಾಳ ಶೇ.10ರಷ್ಟು. |
| ಆ) ಈ ಹಣಕಾಸು ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಎಷ್ಟು ವಿಧಧ ಉದ್ದಿಮೆಗಳಿಗೆ ಆರ್ಥಿಕ ನೆರವು ನೀಡಿದೆ: (ಜಿಲ್ಲಾವಾರು ಮತ್ತು ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ಸಂಖ್ಯಾ ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಯು ವಿವಿಧ ಕೈಗಾರಿಕೆಗಳಿಗೆ ಮತ್ತು ಸೇವಾ ಕ್ಷೇತ್ರದ ಘಟಕಗಳಿಗೆ ನೀಡಿರುವ ಆರ್ಥಿಕ ನೆರವಿನ ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.<br><br>ಮಂಡ್ಯ ಜಿಲ್ಲೆಯ ಮೂರು ವರ್ಷದ ತಾಲ್ಲೂಕುವಾರು ಸಂಖ್ಯಾ ವಿವರ ಅನುಬಂಧ-2ರಲ್ಲಿ ಒದಗಿಸಿದೆ. |
| ಇ) ಕಳೆದ ಮೂರು ವರ್ಷಗಳಲ್ಲಿ ಮಹಿಳಾ ಉದ್ದಿಮೆದಾರರಿಗೆ ಯಾವ ಯಾವ ಯೋಜನಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ: (ವಿವರ ನೀಡುವುದು) | ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕಾ ಮತ್ತು ಸೇವಾಕ್ಷೇತ್ರದ ಹೊಸ ಮತ್ತು ಹಾಲಿ ಘಟಕಗಳಿಗೆ ಕನಿಷ್ಟ ರೂ.5.00 ಲಕ್ಷದಿಂದ ಗರಿಷ್ಟ ರೂ.200.00 ಲಕ್ಷ ಅವಧಿ ಸಾಲ ಹಾಗೂ ಕರ್ನಾಟಕ ರಾಜ್ಯ ಸರ್ಕಾರದಿಂದ ಶೇ.10ರಷ್ಟು ಬಡ್ಡಿ ಸಹಾಯಧನ ದೊರೆಯುತ್ತದೆ. ಸದರಿ ಯೋಜನೆಯ ಅಡಿಯಲ್ಲಿ ಸಂಸ್ಥೆಯು ನೀಡಿರುವ ಸಾಲಗಳ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.<br><br>**(ಮೊತ್ತ ಲಕ್ಷ ರೂ.ಗಳಲ್ಲಿ)**<br>**ವರ್ಷ** / **ಮಂಜೂರಾತಿ** (**ಸಂಖ್ಯೆ**, **ಮೊತ್ತ**)<br>2016-17: 358, 14602.20<br>2017-18: 350, 20084.00<br>2018-19: 271, 26460.31 |
| ಈ) ಕೆ.ಎಸ್.ಎಫ್.ಸಿ ಸಂಸ್ಥೆಯು 2019-2020ರ ಆರ್ಥಿಕ ವರ್ಷದಲ್ಲಿ ಹೊಸ ಯೋಜನೆಗಳು ಯಾವುವು | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯಾವುದೇ ನೂತನ ಸಾಲ ಯೋಜನೆಗಳು ಇದುವರೆಗೆ ಜಾರಿಯಾಗಿರುವುದಿಲ್ಲ. ಆದರೆ ಹಿಂದಿನ ಆರ್ಥಿಕ ವರ್ಷದ ಈ ಕೆಳಕಂಡ ವಿಶೇಷ ಸಾಲ ಯೋಜನೆಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮುಂದುವರಿಸಲಾಗಿದೆ. |

| | |
|---|---|
| | • ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಉದ್ಯಮಿಗಳ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಹಣಕಾಸಿನ ಯೋಜನೆ<br>• ಎಲ್ಲಾ ವರ್ಗದ ಉದ್ದಿಮೆದಾರರಿಗೆ ಶೇ.4ರ ನಿವ್ವಳ ಬಡ್ಡಿದರ ಸಾಲ ಯೋಜನೆ (ಶೇ.10ರಷ್ಟು ಬಡ್ಡಿ ಸಹಾಯಧನ ಯೋಜನೆ).<br>• ಮಹಿಳಾ ಉದ್ದಿಮೆಗಳಿಗೆ ಶೇ.4ರ ನಿವ್ವಳ ಬಡ್ಡಿದರ ಸಾಲ ಯೋಜನೆ (ಶೇ.10ರಷ್ಟು ಬಡ್ಡಿ ಸಹಾಯಧನ ಯೋಜನೆ)<br>• ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಉದ್ಯಮಿಗಳಿಗೆ ಶೇ4ರ ನಿವ್ವಳ ಬಡ್ಡಿದರ ಸಾಲ ಯೋಜನೆ. |
| ಉ) ಹಿಂದುಳಿದ ವರ್ಗಗಳ ಉದ್ದಿಮೆದಾರರಿಗೆ ಆರ್ಥಿಕ ನೆರವಿನ ವಿಶೇಷ ಪ್ರೋತ್ಸಾಹ ಯೋಜನೆಗಳನ್ನು ರೂಪಿಸಲಾಗಿದೆಯೇ: (ವಿವರಗಳನ್ನು ನೀಡುವುದು) | ಹಿಂದುಳಿದ ವರ್ಗಗಳ ಉದ್ದಿಮೆದಾರರಿಗೆ ಪ್ರತ್ಯೇಕವಾಗಿ ವಿಶೇಷ ಪ್ರೋತ್ಸಾಹಕ ಯೋಜನೆ ಸಂಸ್ಥೆಯಲ್ಲಿ ರೂಪಿಸಿರುವುದಿಲ್ಲ.<br>ಆದಾಗ್ಯೂ, ಸದರಿ ವರ್ಗದ ಉದ್ದಿಮೆದಾರರು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಮತ್ತು ಹಾಲಿ ಘಟಕಗಳ ಉತ್ಪಾದನೆಗೆ ಉಪಯೋಗಿಸುವ ಕಟ್ಟಡ ಮತ್ತು ಯಂತ್ರೋಪಕರಣಗಳಿಗೆ, ಕನಿಷ್ಟ ರೂ.5.00 ಲಕ್ಷ ಗರಿಷ್ಟ ರೂ.500.00 ಲಕ್ಷದವರೆಗೆ ಅವಧಿ ಸಾಲ ನೀಡಲಾಗುತ್ತಿದೆ. ಈ ವರ್ಗದ ಉದ್ದಿಮೆದಾರರು ಯೋಜನೆಯ ಸೌಲಭ್ಯವನ್ನು ಪಡೆಯಬಹುದು. ಅಲ್ಲದೆ, ಈ ವರ್ಗದ ಮಹಿಳಾ ಉದ್ಯಮಿಗಳು 200.00 ಲಕ್ಷ ರೂ.ಗಳವರೆಗೆ ಶೇ.4ರಷ್ಟು ಬಡ್ಡಿ ದರದಲ್ಲಿ ಸಾಲ ಸೌಲಭವನ್ನು ಪಡೆಯಬಹುದು. |

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಸಂಖ್ಯೆ : ಆಇ 06 ಬಿಎಫ್‌ಸಿ 2020

ಅನುಬಂಧ-1

ಕಳೆದ ಮೂರು ವರ್ಷಗಳ ಜಿಲ್ಲಾವಾರು ಮಂಜೂರಾದ ಸಾಲದ ಮೊತ್ತ

(ಮೊತ್ತ ಲಕ್ಷ ರೂಗಳಲ್ಲಿ)

| ಕ್ರ.ಸಂ. | ಜಿಲ್ಲೆಗಳು | 2016-17 | | 2017-18 | | 2018-19 | |
|---|---|---|---|---|---|---|---|
| | | ಮಂಜೂರಾದ ಸಾಲ | | ಮಂಜೂರಾದ ಸಾಲ | | ಮಂಜೂರಾದ ಸಾಲ | |
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಬೆಂಗಳೂರು(ನಗರ) | 105 | 10958.20 | 141 | 16318.50 | 174 | 21071.40 |
| 3 | ಬಳ್ಳಾರಿ | 32 | 2363.50 | 31 | 1952.50 | 21 | 3381.80 |
| 4 | ಬೀದರ್ | 29 | 822.00 | 20 | 748.00 | 32 | 1639.00 |
| 5 | ವಿಜಯಾಪುರ | 26 | 1912.65 | 27 | 1890.50 | 47 | 2357.87 |
| 6 | ಚಿಕ್ಕಮಗಳೂರು | 20 | 509.50 | 16 | 1522.00 | 19 | 1625.00 |
| 7 | ಚಿತ್ರದುರ್ಗ | 43 | 5444.76 | 40 | 2262.00 | 45 | 2569.20 |
| 8 | ದಕ್ಷಿಣಕನ್ನಡ | 55 | 2356.00 | 29 | 2081.50 | 25 | 2758.50 |
| 9 | ಧಾರವಾಡ | 116 | 5609.54 | 85 | 6056.60 | 89 | 6801.00 |
| 10 | ಕಲ್ಬುರ್ಗಿ | 47 | 1939.50 | 55 | 3334.00 | 65 | 4329.50 |
| 11 | ಹಾಸನ | 60 | 1402.00 | 48 | 1539.75 | 38 | 2559.50 |
| 12 | ಕೊಡಗು | 17 | 1185.00 | 23 | 1744.00 | 21 | 2623.30 |
| 13 | ಕೋಲಾರ | 34 | 1842.00 | 31 | 2754.00 | 24 | 3081.75 |
| 14 | ಮಂಡ್ಯ | 40 | 1150.00 | 39 | 1630.50 | 25 | 1884.00 |
| 15 | ಮೈಸೂರು | 95 | 7318.00 | 109 | 8129.85 | 85 | 9169.00 |
| 16 | ರಾಯಚೂರು | 13 | 651.50 | 27 | 1762.00 | 17 | 1534.90 |
| 17 | ಶಿವಮೊಗ್ಗ | 15 | 1111.00 | 37 | 1373.00 | 31 | 1835.00 |
| 18 | ತುಮಕೂರು | 75 | 4058.35 | 90 | 3994.40 | 63 | 5065.00 |
| 19 | ಉತ್ತರಕನ್ನಡ | 6 | 405.00 | 17 | 780.00 | 19 | 1478.00 |
| 20 | ಬೆಂಗಳೂರು (ಗ್ರಾ) | 62 | 6454.00 | 70 | 4672.90 | 86 | 8823.50 |
| 21 | ಚಾಮರಾಜನಗರ | 14 | 593.00 | 21 | 1079.00 | 18 | 988.70 |
| 22 | ದಾವಣಗೆರೆ | 55 | 2216.00 | 67 | 4018.00 | 40 | 2620.60 |
| 23 | ಬಾಗಲಕೋಟೆ | 28 | 1500.70 | 39 | 1940.95 | 40 | 3351.55 |
| 24 | ಗದಗ | 22 | 1072.00 | 20 | 1500.65 | 35 | 2408.00 |
| 25 | ಹಾವೇರಿ | 35 | 1114.45 | 31 | 1589.10 | 26 | 1504.40 |
| 26 | ಉಡುಪಿ | 31 | 990.00 | 21 | 788.00 | 17 | 1598.00 |
| 27 | ಕೊಪ್ಪಳ | 25 | 2505.00 | 36 | 2267.00 | 27 | 2881.00 |
| 28 | ರಾಮನಗರ | 22 | 1793.00 | 30 | 1021.30 | 24 | 2446.25 |
| 29 | ಚಿಕ್ಕಬಳ್ಳಾಪುರ | 23 | 1561.60 | 20 | 1776.40 | 23 | 2208.98 |
| 30 | ಯದಗಿರಿ | 3 | 200.00 | 11 | 1136.50 | 15 | 1459.00 |
| | ಒಟ್ಟು | **1195** | **73342.55** | **1291** | **84212.70** | **1234** | **109872.70** |

ಅನುಬಂಧ-2

ಕಳೆದ ಮೂರು ವರ್ಷಗಳ ಮಂಡ್ಯ ಜಿಲ್ಲೆಯ ತಾಲ್ಲೂಕುವಾರು ಮಂಜೂರಾದ ಸಾಲದ ಮೊತ್ತ

(ಮೊತ್ತ ಲಕ್ಷ ರೂಗಳಲ್ಲಿ)

| ಕ್ರ.ಸಂ. | ತಾಲ್ಲೂಕು | 2016-17 | | 2017-18 | | 2018-19 | |
|---|---|---|---|---|---|---|---|
| | | ಮಂಜೂರಾದ ಸಾಲ | | ಮಂಜೂರಾದ ಸಾಲ | | ಮಂಜೂರಾದ ಸಾಲ | |
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಕೃಷ್ಣರಾಜಪೇಟೆ | 2 | 45.00 | 1 | 8.00 | 0 | 0.00 |
| 2 | ಮದ್ದೂರು | 16 | 471.00 | 13 | 527.00 | 11 | 777.75 |
| 3 | ಮಳವಳ್ಳಿ | 1 | 50.00 | 1 | 40.00 | 0 | 0.00 |
| 4 | ಮಂಡ್ಯ | 12 | 274.00 | 8 | 419.00 | 8 | 410.25 |
| 5 | ನಾಗಮಂಗಲ | 4 | 195.00 | 11 | 418.00 | 0 | 0.00 |
| 6 | ಪಾಂಡವಪುರ | 2 | 55.00 | 2 | 57.50 | 0 | 0.00 |
| 7 | ಶ್ರೀರಂಗಪಟ್ಟಣ | 3 | 60.00 | 3 | 161.00 | 6 | 696.00 |
| | ಒಟ್ಟು | 40 | 1150.00 | 39 | 1630.50 | 25 | 1884.00 |